1	2
26) ಎ.ಪಿ.ಎಂ.ಸಿ. ಗೇಟದಿಂದ ಸ್ಟೇಶನ್ ಬ್ಯಾಕರೋಡ (ಬ್ರಿಡ್ಜ್)ದವರೆಗೆ	ಶ್ರೀ ಬಿ.ಕೆ. ಗುಡದಿನ್ನಿ ರಸ್ತೆ
27) ನಾಲಬಂದ ಚೌಕದಿಂದ ಶ್ರೀ ಗಣಪತಿ ಚೌಕದವರೆಗೆ	ಶ್ರೀ ನೆಹರೂ ರಸ್ತೆ
28) ವಿಜಯಹೌಸಿಂಗ್ ಕಾಲನಿಯಿಂದ ಸೋಲಾಪುರ ಕೂಡುವ ರಸ್ತೆ (ಲಿಂಗದರಸ್ತೆ)	ಶ್ರೀ ಫ.ಗು. ಹಳಕಟ್ಟಿ ರಸ್ತೆ
29) ಗೋಲಗುಮ್ಮಟ ಎದುರಿನ ರಸ್ತೆಯಿಂದ ಹಕೀಮ ಚೌಕದ ರಸ್ತೆಯವರೆಗೆ	ಶ್ರೀಷಣ್ಮುಕಾರೂಢ ಮಠದ ರಸ್ತೆ.

ಇ) ನಗರಸಭೆಯಲ್ಲಿ ಪೂರ್ಣ ಪ್ರಮಾಣದಲ್ಲಿ ರಸ್ತೆಗಳಿಗೆ ಮತ್ತು ವೃತ್ತಗಳಿಗೆ ನಾಮಕರಣ ಮಾಡಿರುವ ಬಗ್ಗೆ ದಾಖಲೆಗಳು ಇರುವುದಿಲ್ಲ, ದಾಖಲಾತಿಗಳನ್ನು ಕ್ರೋಢೀಕರಿಸಿ ಅದರಂತೆ ರಿಜಿಸ್ಟರ್‌ನಲ್ಲಿ ಅಧಿಕೃತವಾಗಿ ದಾಖಲಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಕೆಲವು ರಸ್ತೆ ಮತ್ತು ವೃತ್ತಗಳಿಗೆ ನಾಮಕರಣ ಫಲಕಗಳನ್ನು ಹಾಕಲಾಗಿದೆ.

ಗದಗ್ ತಾಲ್ಲೂಕು ಮುಳಗುಂದ ಪಟ್ಟಣಕ್ಕೆ ಐ.ಡಿ.ಎಸ್.ಎಂ.ಟಿ ಯೋಜನೆ

2110 (2232) - ಶ್ರೀ ಪಾಟೀಲ್ ಸಿದ್ದಲಿಂಗನವಾಡ ಸಿದ್ದನಗೌಡ (ತಿಕೋಟ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ಜಿಲ್ಲೆ ಗದಗ ತಾಲ್ಲೂಕು ಮುಳಗುಂದ ಪಟ್ಟಣ ಪಂಚಾಯಿತಿಯು ಐ.ಡಿ.ಎಸ್.ಎಂ.ಟಿ ಯೋಜನೆ ಆಧ್ಯತಾ ಪಟ್ಟಿಯಲ್ಲಿ ಸೇರಿದೆಯೇ?

ಆ) ಸೇರಿದ್ದಲ್ಲಿ, ಹಣ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಕುಮಾರ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ಸೇರಿದೆ.

ಆ) ಡಿಸಂಬರ್ ತಿಂಗಳ ಅಂತ್ಯದೊಳಗೆ ಪೌರಾಡಳಿತ ನಿರ್ದೇಶನಾಲಯವು ಹಣ ಬಿಡುಗಡೆ ಮಾಡಲಾಗುವುದು.

ಗದಗ ಬಿಜಾಪುರ ರೈಲ್ವೆ ಗೇಜ್ ಪರಿವರ್ತನೆ

2111 (2396) - ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ): ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನ ಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ರೈಲ್ವೆ ಇಲಾಖೆ ಮತ್ತು ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ ಗದಗ-ಬಿಜಾಪುರ ರೈಲು ಗೇಜು ಪರಿವರ್ತನೆ ಕಾರ್ಯ ಹಮ್ಮಿಕೊಂಡಿದ್ದು ನಿಜವೆ;

ಆ) ಈ ಕಾರ್ಯಕ್ಕಾಗಿ ಪ್ರಸಕ್ತ ವರ್ಷ ಕೇಂದ್ರ ಸರಕಾರ 20 ಕೋಟಿ ರೂ ಹಾಗೂ ರಾಜ್ಯ ಸರ್ಕಾರ 20 ಕೋಟಿ ರೂ ಇದಕ್ಕಾಗಿ ವಿನಿಯೋಗ ಮಾಡಲು ಯೋಜಿಸಿ ಆಯವ್ಯಯ ಮಂಡಿಸಿದ್ದು ನಿಜವೆ;